ಅಥರ್ವವೇದದ

# ಒಂದು ಶಾಂತಿಮಂತ್ರ

ಭಾವಿಸಿದವರು :

ಎಸ್. ಜಿ. ಶಾಸ್ತ್ರಿ



ಕರ್ಣಾಟಕ ಸಂಘ
ಸೆಂಟ್ರಲ್ ಕಾಲೆಜ್, ಬೆಂಗಳೂರು

ಮೂರಾಣೆ

# ನಮ್ಮ ಪ್ರಕಟನೆಗಳು

---

| | | |
|---|---|---|
| ೧. ಶ್ರೀ ಕೈಲಾಸಂ ಅವರ ಸ್ಮರಣೆ | ರೂ. | ೨/೪ |
| ೨. ಮಾಲವಿಕಾಗ್ನಿಮಿತ್ರನಾಟಕಂ | ರೂ. | ೧/೧೨ |
| ೩. ಮೊನ್ನ ಮನ್ನ | ರೂ. | ೨/- |
| ೪. ನಾಗನ ಪದಗಳು | ರೂ. | ೧/೪ |
| ೫. ಶಕ್ತಿ | ರೂ. | ೩/- |
| ೬. ಸುಪ್ರಭಾತಮ್ | ರೂ. | ೧/- |
| ೭. ಬಾಹುಬಲಿ ವಿಜಯಂ | ರೂ. | ೧/೮ |
| ೮. ಕಾರ್ಕಳದ ಗೊಮ್ಮಟಸ್ವಾಮಿ | ರೂ. | ೧/- |
| ೯. ಸೋಕ್ರಟೀಸನ ಮರಣ | ರೂ. | ೧/೪ |
| ೧೦. ಲಿಯೊನಾರ್ಡ್ | ರೂ. | ೧/೮ |

ನಮ್ಮ ಪ್ರಕಟನೆಗಳನ್ನು
ಕೊಂಡುಕೊಂಡು, ನಮ್ಮ ಕೆಲಸಕ್ಕೆ ನೆರವಾಗಿರಿ.

**ಕರ್ಣಾಟಕ ಸಂಘ**
**ಸೆಂಟ್ರಲ್ ಕಾಲೆಜ್, ಬೆಂಗಳೂರು.**

ಅಥರ್ವವೇದದ

# ಒಂದು ಶಾಂತಿಮಂತ್ರ

ಭಾವಿಸಿದವರು:

**ಎಸ್. ಜಿ. ಶಾಸ್ತ್ರಿ**

ಗಾಂಧೀ ಜಯಂತಿಯ ದಿವಸ
೨, ಅಕ್ಟೋಬರ್, ೧೯೫೫

**ಕರ್ಣಾಟಕ ಸಂಘ**
ಸೆಂಟ್ರಲ್ ಕಾಲೇಜ್, ಬೆಂಗಳೂರು.

# ಮುನ್ನುಡಿ

ಋತವೊಂದೆ ಗೆಲ್ಲುವುದು, ಅನೃತವಲ್ತು;
ಅಮೃತಮೆನೆ ವಿದ್ಯೆಯೆ, ಅವಿದ್ಯೆಯಲ್ತು;
ವಿಶ್ವಭಾರತಿ ಶರಣು, ಕಿರುತೀರ್ಥವಲ್ತು.
ಸರ್ವಜೀವಂಗಳುಂ ಮುಕ್ತಿಯಂ ಕಾಣ್ಗೆ;
ದೇವರೊಳ್ ಪಗೆವವರ ಕಾಳಗಂ ಮಾಣ್ಗೆ;
ಸಾವುದೆಲ್ಲಾ ಸತ್ತು, ಬಾನಾಳ್ಕೆ ಪೂಣ್ಗೆ.
ಜ್ಞಾನಧರ್ಮಂಗಳಿಂ ತಣ್ಪನಿಳೆ ತಾಳ್ಗೆ;
ಶ್ರೀ **ಜಯನ್** ನಿಡುಬಾಳಿ ನಮ್ಮನೊಲಿದಾಳ್ಗೆ;
ಕನ್ನಡಿಗರುಸಿರಾಗಿ ಕನ್ನಡಂ ಬಾಳ್ಗೆ.

—'ಶ್ರೀ' ಅವರ 'ಶುಕ್ರಗೀತೆ'ಯಿಂದ.

# ಅರಿಕೆ.

'ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ' ಎಂಬ ಶಾಂತಿಮಂತ್ರವನ್ನು ಭಾವಿಸಿದ ಶ್ರೀ ಎಸ್. ಜಿ. ಶಾಸ್ತ್ರಿ ಅವರು ಶಾಸ್ತ್ರ—ಸಾಹಿತ್ಯ ಎರಡನ್ನೂ ಎರಡು ಕಣ್ಣುಗಳಂತೆ ಕಾಪಾಡಿಕೊಂಡು ಕಲಿತು ಬೆಳೆದು ಬದುಕಿದವರು. ಈ ಭಾವನೆಯನ್ನು ಅವರು ಬರೆಯುವ ಕಾಲಕ್ಕೆ (ಮೇ, ೧೯೫೪) ಅವರ ಹೊರಗಿನ ಕಣ್ಣು ಮುಚ್ಚುತ್ತಾ ಬಂದಿತ್ತಾದರೂ ಅವರ ಒಳಗಿನ ಕಣ್ಣು ತನ್ನ ಜಾಗೃತಿಯನ್ನು ಇನ್ನೂ ಉಳಿಸಿಕೊಂಡಿತ್ತು. ದೊಡ್ಡ ಅರ್ಥವುಳ್ಳ ಮಂತ್ರವೊಂದನ್ನು ದೊಡ್ಡ ಮನಸ್ಸೊಂದು—ತನ್ನ ಏಕಾಂತತೆಯಲ್ಲಿ, ತನ್ನ ಅನನ್ಯ ಶರಣತೆಯಲ್ಲಿ, ತನ್ನ ಆತ್ಮಾವಲಂಬನಕ್ಕಾಗಿ—ಹೀಗೆ ದೊಡ್ಡದಾಗಿ ಭಾವಿಸಿಕೊಂಡಿತು.

ಶ್ರೀ ಶಾಸ್ತ್ರಿಗಳು ನಮ್ಮ ಸಂಘಕ್ಕೆ ಬಹಳ ಕಾಲದಿಂದಲೂ ಹಿತೈಷಿಗಳು. ಅವರು ದೇಹಾನ್ತರ ಪ್ರಾಪ್ತಿಯನ್ನು ಪಡೆದಿರುವ ಈ ದಿವಸದಲ್ಲಿ,* ಅವರ ಹಿತವಾದ ಭಾವನೆಗಳಿಂದ ನಮ್ಮ ಸದಸ್ಯರಿಗೆ ಹಿತಸಾಧನೆಯಾಗಲೆಂದು ಇದನ್ನು ಮುದ್ರಿಸಿಕೊಟ್ಟಿದ್ದೇವೆ. ಇತಿ ಶಂ.

ಜಿ. ಪಿ. ರಾಜರತ್ನಂ
ಕರ್ಣಾಟಕ ಸಂಘದ ಪರವಾಗಿ.

* ೨೨—೯—೫೫

ಓಂ.

ಓ ದೇವರುಗಳೆ, ನಾವು ನಮ್ಮ ಕಿವಿಗಳಿಂದ ಶುಭವಾದ ದ್ದನ್ನು ಕೇಳುವುದಾಗಲಿ.

ನಮ್ಮ ಯಾಗಗಳಿಗೆ ಯೋಗ್ಯರಾದವರೆ, ನಾವು ನಮ್ಮ ಕಣ್ಣುಗಳಿಂದ ಶುಭವಾದದ್ದನ್ನು ಕಾಣುವುದಾಗಲಿ.

ಸ್ಥಿರವಾದ ಅಂಗಗಳನ್ನೂ ಮೈಗಳನ್ನೂ ಹೊಂದಿದವ ರಾಗಿ, ನಾವು ನಿಮ್ಮನ್ನು ಸ್ತುತಿಮಾಡುತ್ತ, ದೇವರುಗಳು ಕೊಟ್ಟಿರುವಷ್ಟು ಆಯುಸ್ಸನ್ನು ಬದುಕುವುದಾಗಲಿ.

ಪ್ರಖ್ಯಾತನಾದ ಇಂದ್ರನು ನಮಗೆ ಒಳ್ಳೆಯದು ಮಾಡಲಿ.

ಸರ್ವವನ್ನೂ ತಿಳಿದಿರುವ ಸೂರ್ಯನು ನಮಗೆ ಒಳ್ಳೆಯದು ಮಾಡಲಿ.

ಅರಿಷ್ಟಗಳನ್ನು ನಾಶಮಾಡುವ ಶಿವನು ನಮಗೆ ಒಳ್ಳೆ ಯದು ಮಾಡಲಿ.

ವಾಕ್ಕಿಗೆ ಅಧಿಪತಿಯಾದ ಬೃಹಸ್ಪತಿಯು ನಮಗೆ ಒಳ್ಳೆ ಯದು ಮಾಡಲಿ.

ಓಂ ಶಾಂತಿಃ ಶಾಂತಿಃ ಶಾಂತಿಃ

ಓಂ ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ
ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ।
ಸ್ಥಿರೈರಂಗೈಸ್ತುಷ್ಟುವಾಂಸಸ್ತನೂಭಿರ್
ವ್ಯಶೇಮ ದೇವಹಿತಂ ಯದಾಯುಃ॥
ಸ್ವಸ್ತಿ ನ ಇಂದ್ರೋ ವೃದ್ಧಶ್ರವಾಃ।
ಸ್ವಸ್ತಿ ನಃ ಪೂಷಾ ವಿಶ್ವವೇದಾಃ।
ಸ್ವಸ್ತಿ ನಸ್ತಾರ್ಕ್ಷ್ಯೋ ಅರಿಷ್ಟನೇಮಿಃ।
ಸ್ವಸ್ತಿ ನೋ ಬೃಹಸ್ಪತಿರ್ದಧಾತು॥
ಓಂ ಶಾಂತಿಃ ಶಾಂತಿಃ ಶಾಂತಿಃ॥

ಮೇಲಿನ ಶಾಂತಿಮಂತ್ರವು ನನಗೆ ಗುರುಮುಖದಿಂದ ಪಾಠವಾಗಿಲ್ಲ. ಪದಶಃ ಅರ್ಥಮಾಡಿಕೊಂಡು ಪ್ರತಿ ದಿನವೂ ಆ ಮಂತ್ರವನ್ನು ಬಾಯಲ್ಲಿ ಹೇಳುವುದು ಮತ್ತು ಮನಸ್ಸಿನಲ್ಲಿ ಚಿಂತನೆ ಮಾಡುವುದು ನನ್ನ ಪದ್ಧತಿ. ಕೆಲವು ದಿನಗಳ ಹಿಂದೆ "Not by bread alone" (ಕೇವಲ ರೊಟ್ಟಿಯಿಂದಲೇ ಅಲ್ಲ) ಎಂಬ ಶಿರೋನಾಮದಲ್ಲಿ ಮೇಲಿನ ಶಾಂತಿಮಂತ್ರದ ಭಾವಾರ್ಥಗರ್ಭಿತವಾದ ಒಂದು ಸಣ್ಣ ಪ್ರಬಂಧವನ್ನು ಇಂಗ್ಲಿಷಿನಲ್ಲಿ ಓದಿದೆ. ಆಗ್ಗೆ ಮೇಲೆ ಹೇಳಿದ ಶಾಂತಿಮಂತ್ರವೂ, ಅದನ್ನು ನಿತ್ಯವೂ ಪಠಿಸುತ್ತಿದ್ದ ನನ್ನ ಪೂಜ್ಯ ತಂದೆಯವರೂ, ಅವರ ಜೀವನದ ರೀತಿ ನೀತಿಗಳ ಕೆಲವು ಅಂಶಗಳೂ ನನ್ನ ಸ್ಫೂರ್ತಿಗೆ ಬಂದವು. ಆ ಸ್ಫೂರ್ತಿಯು ಒಂದು ಆವೇಶವಾಯಿತು. ಅದರ ಪರಿಣಾಮ ಈ ಸಣ್ಣ ಬರವಣಿಗೆ. ಇದು ನನ್ನ ಮನಸ್ಸಿಗೆ ತೋರಿದ್ದು —ಮೇಲಿನ ಶಾಂತಿಮಂತ್ರದ ವಿಸ್ತೃತ ತಾತ್ಪರ್ಯ.

ಮನುಷ್ಯನ ಬದುಕಿನ ಸಾರ್ಥಕತೆ—ಕೇವಲ ತನ್ನ ಉದರಪೋಷಣೆಯಿಂದಲ್ಲ; ಹೊಟ್ಟೆಯನ್ನು ಹೊರೆದುಕೊಳ್ಳುವ ಅಷ್ಟರಿಂದಲ್ಲ;

ಬದುಕಿನ ಸಾರ್ಥಕತೆ ಮನೋವಾಕ್ಕಾಯಗಳ ಸಂಸ್ಕಾರಗಳಿಂದ;

ಪ್ರಕೃತಿಸೌಂದರ್ಯೋಪಾಸನೆಯಿಂದ;

ಬ್ರಹ್ಮಸೃಷ್ಟಿಯಲ್ಲಿನ ಜೀವಕೋಟಿಗಳ ಸಾಮರಸ್ಯ ಜ್ಞಾನದಿಂದ;

ಸತ್ಯಾನ್ವೇಷಣದಿಂದ, ಸತ್ಯಶೋಧನೆಯಿಂದ, ಸತ್ಯಸಾಧನೆಯಿಂದ, ಸತ್ಯವ್ರತದಿಂದ;

ಭದ್ರೋಪಾಸನೆಯಿಂದ;

ಧರ್ಮಶೀಲಗುಣಗಳಿಂದ ಬರುವ ಮನಃಪ್ರಸಾದದಿಂದ;

* * *

ನಮ್ಮ ಬದುಕಿನ ಸಾರ್ಥಕತೆ—ಸುಮ್ಮನೆ ಉಂಡು ತಿಂದು ತೇಗಿ ಕಾಲಕಳೆಯುವುದರಿಂದಲ್ಲ;

ಮಾಡಬೇಕಾದ ಕೆಲಸಗಳನ್ನು ಮಾಡುವುದರಿಂದ;
ಕೃತಕೃತ್ಯತೆಯಿಂದ ಬರುವ ಸಮಾಧಾನದಿಂದ;
ಮಿತವರಿತ ವಿನೋದದಿಂದ;
ಮನೋಲ್ಲಾಸದಿಂದ;
ಇಷ್ಟರಾದ ಪರಿಜನರ ಪ್ರೀತಿವಿಶ್ವಾಸಗಳಿಂದ;
ಆಪ್ತರಾದ ಗೆಳೆಯರ ಸಾದರ ಸಖ್ಯಲಾಭದಿಂದ;
ಸತ್ಪ್ರೇರಣೆಯಿಂದ ಕೂಡಿದ ಮನದಾಶೆಗಳಿಂದ;
ಗುರುಹಿರಿಯರ ಸೇವೆಯಿಂದ;
ಭಗವಂತನ ಪೂಜೆಯಿಂದ;

* * *

ನಮ್ಮ ಬದುಕಿನ ಸಾರ್ಥಕತೆ—ರೊಟ್ಟಿ ತುಪ್ಪಗಳ ಸೇವನೆಯಿಂದಲ್ಲ;

ಮಧ್ಯರಾತ್ರಿಯಲ್ಲಿ ನಭೋಮಂಡಲದಲ್ಲಿನ ನಕ್ಷತ್ರಗಳ ಜ್ಯೋತಿರ್ವಿಭ್ರಮವನ್ನು ಕಣ್ಣೆತ್ತಿ ಧ್ಯಾನಮನಸ್ಕರಾಗಿ ನೋಡುತ್ತ, ಕ್ಷಣವಾದರೂ ಭಗವತ್ಸಾನ್ನಿಧ್ಯವನ್ನು ಅನುಭವಿಸುವುದರಿಂದ;

ಪ್ರಾತಃಕಾಲದಲ್ಲಿ ಉಷಾದೇವಿಯು ಸೂರ್ಯದೇವನನ್ನು ಸ್ವಾಗತಿಸುವುದಕ್ಕೆ ಮಾಡುವ ಜಾಜ್ವಲ್ಯಮಾನಗಳಾದ ಪೂರ್ವಸಿದ್ಧತೆಗಳನ್ನು ನೋಡಿ ಆನಂದಿಸುವುದರಿಂದ;

ಸಂಧ್ಯಾರಾಣಿಯ ಚಿತ್ರವಿಚಿತ್ರ ಸ್ವೇಚ್ಛಾರಾಗ ವಿಲಾಸಗಳನ್ನು ನೋಡಿ ವಿಸ್ಮಯಪಡುವುದರಿಂದ;

ಕೈಲಾಸಪರ್ವತವನ್ನು ಪ್ರತಿಬಿಂಬಿಸುತ್ತಿರುವ ಮಾನಸಸರೋವರವನ್ನು ಅಮೃತಸರೋವರವನ್ನಾಗಿ ಮಾಡುತ್ತಿರುವ ಪ್ರಭಾಮತ್ತನಾದ ಪೂರ್ಣಚಂದ್ರನ ದರ್ಶನದಿಂದ;

ಪ್ರತಿ ದಿನವೂ ಧ್ರುವನಕ್ಷತ್ರವನ್ನು ನೋಡುವುದರಿಂದ;

* * *

ನಮ್ಮ ಬದುಕಿನ ಸಾರ್ಥಕತೆ—ಜೊಲ್ಲಿನ ಹಂಬಲನ್ನು ತೀರಿಸುವ ಮಾತ್ರದಿಂದಲ್ಲ;

ಸಸ್ಯ ಸಮೃದ್ಧಿಗಳನ್ನು ಕೊಡುವ ಮಳೆಯನ್ನು ಪೂಜಿಸುವುದರಿಂದ;

ಕಾಮನಬಿಲ್ಲನ್ನು ನೋಡಿ ಆನಂದಿಸುವುದರಿಂದ;

ಮಳೆಗಾಲದಲ್ಲಿ ಮೇಘಸಂದೇಶಗಳನ್ನು ಕಳುಹಿಸುವುದರಿಂದ;

ಚಂಡಮಾರುತದಿಂದ ಪ್ರಕ್ಷುಬ್ಧವಾಗಿ, ಪರ್ವತಗಳಂತಿರುವ ಅಲೆಗಳನ್ನು ದಡದ ಮೇಲೆ ಅಪ್ಪಳಿಸುತ್ತಿರುವ ಸಮುದ್ರರಾಜನನ್ನು ನೋಡಿ ನಡುಗುವುದರಿಂದ;

ಪ್ರಶಾಂತನಾಗಿ ಸಾಗರಿಕೆಯನ್ನು ನೈ ನೋಯಿಸದಂತೆ ದಡಕ್ಕೆ ಒಂದು ಹಲಗೆಯ ಮೇಲೆ ತೇಲಿಸಿ ತಂದುಬಿಡುವ ಅದೇ ಸಮುದ್ರರಾಜನನ್ನು ನೋಡಿ ಆನಂದಿಸುವುದರಿಂದ;

ಮಹಾಪರ್ವತಗಳ ಮಹಿಮಾರಹಸ್ಯಗಳನ್ನು ಯಥಾಮತಿಯಾಗಿ ತಿಳಿಯುವುದರಿಂದ;

ಪರ್ವತಾರೋಹಣದಿಂದ ಆಗುವ ಮನಃಪ್ರಸಾದ ಮತ್ತು ಶಾಂತಿಗಳಿಂದ;

ಮಹಾವೃಕ್ಷಗಳಿಂದ ನಿಬಿಡವಾದ ಅರಣ್ಯದಲ್ಲಿ ಶಾಂತಿಮನಸ್ಕರಾಗಿ ಸಂಚರಿಸಿ, ಋಷ್ಯಾಶ್ರಮಗಳಲ್ಲಿ ಸ್ವಲ್ಪ ಕಾಲವಾದರೂ ವಾಸಿಸುವುದರಿಂದ;

ತೀರ್ಥಯಾತ್ರೆಗಳಿಂದ;

ದೈವಭಕ್ತಿಯಿಂದ;

*　　*　　*

ನಮ್ಮ ಬದುಕಿನ ಸಾರ್ಥಕತೆ—ಬರಿಯ ಹೊಟ್ಟೆ ಪಾಡನ್ನು ನೋಡಿಕೊಳ್ಳುವುದರಿಂದ ಮಾತ್ರವಲ್ಲ;

ಉಷಃಕಾಲದಲ್ಲಿ ಪಕ್ಷಿಗಳ ಕೂಜನವನ್ನು ಕೇಳುವುದರಿಂದ;

("....ಸ್ತೋತ್ರಮಾಡುವ ಹಾಗೆ ನಿನ್ನನು ಹಕ್ಕಿಗಳ್ ದನಿಗೈವವೈ....")

ಬಾಲಜಲ್ಪಿತಗಳನ್ನೂ ಕಿರುನಗೆಗಳನ್ನೂ ಕೇಳುವುದರಿಂದ;

ತಾಯಿಯರ ಜೋಗುಳದ ಹಾಡನ್ನು ಆಲಿಸುವುದರಿಂದ;

ವೀಣಾನಾದ ರಸಾಸ್ವಾದನದಿಂದ;

ಹೃದಯಾಂತರಾಳವನ್ನು ಮುಟ್ಟಿ ಶ್ರೋತೃವನ್ನು ಪುಲಕಿತನನ್ನಾಗಿ ಮಾಡುವ ಪಿಟೀಲುವಾದ್ಯದ ಮಧುರ ರವಾನುಭವದಿಂದ;

ವಸಂತಕಾಲದ ಕಲಕಂಠಿಯ ಪಂಚಮಸ್ವರಕ್ಕೆ ಕಿವಿಕೊಡುವುದರಿಂದ;

ಲಲನೆಯರ ಇಂಪಾದ ಗಾನದಿಂದ;

ವೇದಘೋಷ ಶ್ರವಣದಿಂದ;

ಧನುರ್ಮಾಸದ ಬೆಳಗಿನ ಜಾವದಲ್ಲಿ, ಬೆಟ್ಟದ ಮೇಲಿನ ಗುಡಿಯಲ್ಲಿ, ಮಂಗಳಾರತಿಯ ಹೊತ್ತಿನಲ್ಲಿ

ಮೊಳಗುವ ವಾದ್ಯಗಳ ನಾದನಿನಾದಗಳನ್ನು ಬಿಟ್ಟದ ತಪ್ಪಲಲ್ಲಿ ಹೋಗುತ್ತಿರುವ ಒಂಟಿ ಪಥಿಕನಂತೆ ಕೇಳಿ ಪ್ರಶಾಂತನಾಗುವುದರಿಂದ;

ಇಷ್ಟಸತಿಯ ಪ್ರಣಯದ ಪಿಸು ಪಿಸು ಮಾತುಗಳಿಂದ;

ಕೊನೆಯದಾಗಿ—ನಿಶ್ಶಬ್ದದ ತಲ್ಲೀನತೆಯಲ್ಲಿ ಎಲ್ಲ ಶಬ್ದಗಳನ್ನೂ ಕೇಳುವುದರಿಂದ;

*  *  *

ನಮ್ಮ ಬದುಕಿಗೆ ಸಾರ್ಥಕತೆ ಬರುವುದು—ಬರಿಯ ಅನ್ನಆಹಾರಗಳಿಂದಲ್ಲ;

ಚಿತ್ರಕಲಾವಿಶಾರದರು ರೂಪಿಸಿರುವ ಸುಂದರ ಚಿತ್ರಗಳನ್ನು ನೋಡಿ ಆನಂದಿಸುವುದರಿಂದ;

ಪುರಾತನ ಕಾಲದಿಂದಲೂ ನಮ್ಮ ಭಾರತ ದೇಶ ದಲ್ಲಿ, ಆಸೇತುಹಿಮಾಚಲ ಪರ್ಯಂತ ದೇವಸ್ಥಾನ ಗಳಲ್ಲೂ ರಾಜಗೃಹಗಳಲ್ಲೂ ಲೋಹದಿಂದಲೂ ಶಿಲೆ ಗಳಿಂದಲೂ ನಿರ್ಮಿತವಾಗಿರುವ ಸಜೀವ ವಿಗ್ರಹ ಗಳನ್ನು ಕಣ್ಣೆತ್ತಿ, ಕಣ್ಣುಬಿಟ್ಟು, ಮನಸ್ಸಿಟ್ಟು, ತದೇಕ ಧ್ಯಾನದಿಂದ ನೋಡಿ, ಶಿಲ್ಪಿಯ ಮನೋಭಾವಗಳನ್ನು ಅರಿಯಲು ಪ್ರಯತ್ನಿಸಿದಾಗ ಆಗುವ ಪರವಶತೆ ಯಿಂದ;

ತಾಳ ಮೇಳ ಸಂಗೀತ ಸಾಹಿತ್ಯಗಳಿಂದೊಡಗೂಡಿದ ನಾಟ್ಯಾಭಿನಯಗಳನ್ನು ನೋಡಿ ಆನಂದಿಸುವುದ ರಿಂದ;

ನಟರಾಜನ ಧ್ಯಾನದಿಂದ;

ಕಾವ್ಯರಸಾಸ್ವಾದನದಿಂದ;

ನಿಃಸ್ವಾರ್ಥತೆಯಿಂದ ಲೋಕಹಿತಕ್ಕಾಗಿ ಶ್ರಮಿಸುವ ದೈವಾಂಶಪುರುಷರಾದ ಸಾಹಿತ್ಯಸಂಗೀತನೃತ್ಯವಾದ್ಯ ಶಿಲ್ಪಕಲಾಭಿಜ್ಞರಿಗೂ ತತ್ತ್ವಜ್ಞಾನಿಗಳಿಗೂ ಭಕ್ತಿ

ಕೃತಜ್ಞತಾಪೂರ್ವಕವಾಗಿ ನಮ್ಮ ಮನಸ್ಸಿನಲ್ಲಿ ಅಂತಃ ಕರಣಪೂರ್ಣವಾದ ಪೂಜೆಯನ್ನು ಸಲ್ಲಿಸುವುದರಿಂದ;

ನಮ್ಮ ಅಂತಃಶುದ್ಧಿಯಿಂದ;

*  *  *

ನಮ್ಮ ಬದುಕಿನ ಸಾರ್ಥಕತೆ ನಾವು ಪ್ರತಿದಿನವೂ ಜಠರಾಗ್ನಿಗೆ ಆಹುತಿಯನ್ನು ಕೊಡುವುದರಿಂದ ಮಾತ್ರವಲ್ಲ;

ಶ್ರೀಗಂಧದ ಸೌರಭದಿಂದ;

ಕಸ್ತೂರಿಯ ಕಂಪಿನಿಂದ;

ಮೊಲ್ಲೆ, ಮಲ್ಲಿಗೆ, ಜಾಜಿ, ಸಂಪಗೆ, ಗುಲಾಬಿ, ಪಾರಿಜಾತ ಪುಷ್ಪಗಳ ಪರಿಮಳದಿಂದ;

ಪುಷ್ಪಾಪಚಯದಿಂದ;

ಹಸ್ತದ್ವಯಗಳಿಂದಲೂ ದೇವರಿಗೆ ಪುಷ್ಪಾರ್ಚನೆ ಮಾಡುವುದರಿಂದ;

ಸಾಯಂಕಾಲದಲ್ಲಿ ಕಮಲದ ಪರಿಮಳಗ್ರಂಥಿಗಳನ್ನು ಸೂರೆಮಾಡಿ, ತಾವರೆಯ ಕೆರೆಯ ಮೇಲೆ ಬೀಸಿ ಬರುತ್ತಿರುವ ತಂಗಾಳಿಯ ಸೇವನೆಯಿಂದ;

ಯಜ್ಞಕುಂಡದಲ್ಲಿ ಪಚನವಾಗುತ್ತಿರುವ ಹವಿಸ್ಸಿನ ವಾಸನೆಯಿಂದ;

ಹಸುಮಕ್ಕಳ ಶಿರಾಘ್ರಾಣದಿಂದ;

* * *

ನಮ್ಮ ಬದುಕಿನ ಸಾರ್ಥಕತೆ ಕೇವಲ ಕವಳ ಧ್ವಂಸದಿಂದಲ್ಲ;

ಅದ್ಭುತಕಾರ್ಯಗಳನ್ನು ಸಾಹಸದಿಂದ ಸಾಧಿಸಲು ಪ್ರಯತ್ನಪಡುವುದರಿಂದ;

ಹೊಸಹೊಸ ವಿಷಯಗಳನ್ನು ಕಂಡುಹಿಡಿಯುವುದರಿಂದ;

ಜ್ಞಾನಾನ್ವೇಷಣೆಯಿಂದ;

ಜ್ಞಾನಾಭಿವೃದ್ಧಿಯಿಂದ;

ವಿಜ್ಞಾನಾಭಿವೃದ್ಧಿಯಿಂದ;

ಜ್ಞಾನವಿಜ್ಞಾನಗಳ ಸದುಪಯೋಗದಿಂದ;

*          *          *

ನಮ್ಮ ಬದುಕಿನ ಸಾರ್ಥಕತೆ ಖಂಡಿತವಾಗಿಯೂ ನಾಲಗೆಯ ದಾಸ್ಯದಿಂದಲ್ಲ;

ನಿಜವಾದ ಸೇವೆಯಿಂದ;

ಗುರುಹಿರಿಯರ ಸೇವೆಯಿಂದ;

ಸ್ವಾರ್ಥತೆಯಿಲ್ಲದ ಲೋಕಸೇವೆಯಿಂದ;

ಲೋಕಸೇವೆಯೇ ಲೋಕನಾಥನ ಸೇವೆಯೆಂದು ನಂಬುವುದರಿಂದ;

ನಂಬಿ ನಡೆಯುವುದರಿಂದ;

ಸ್ವಾಮಿಸೇವಾನಿರತ ಆಂಜನೇಯನ ಸ್ಮರಣೆಯಿಂದ;

ಆತನ ಅನುಸರಣೆಯಿಂದ;

*            *            *

ನಮ್ಮ ಬದುಕಿನ ಸಾರ್ಥಕತೆ ಸುಮ್ಮನೆ ಉಂಡು ತಿಂದು ಇದ್ದು ಹೋಗುವುದರಿಂದಲ್ಲ;

ಸರಸಕವಿಗಳ ಕಾವ್ಯಾವಲೋಕನದಿಂದ;

ನೀತಿನಡೆಗಳ ವಿಷಯದಲ್ಲಿ ಋಷಿವಾಕ್ಯಾನುಸರಣೆಯಿಂದ;

ದಾಸರ ಹಿತೋಪದೇಶಗಳಲ್ಲಿ ಆಪ್ತತೆಯಿಂದ;

ರಾಮಾಯಣ ಮಹಾಭಾರತ ಭಾಗವತಾದಿ ಪುರಾಣಕಾವ್ಯಪಠನದಿಂದ;

ಮಹಾನುಭಾವರ ಜೀವನಚರಿತ್ರೆಗಳ ವ್ಯಾಸಂಗದಿಂದ;

ಸರಸ್ವತೀ ಪೂಜೆಯಿಂದ;

*　*　*

ನಮ್ಮ ಬದುಕಿನ ಸಾರ್ಥಕತೆ ಬಾಯಿ ಬಯಸಿದ್ದನ್ನು ಒದಗಿಸುವುದು ಮಾತ್ರದಿಂದಲ್ಲ;

ಶ್ರದ್ಧೆಯಿಂದ ದಾನ ಕೊಡುವುದರಿಂದ;

ಬಡವರ ಸಹಾಯಕ್ಕೆ ನೀಡುವುದರಿಂದ;

ಪಾತ್ರವರಿತು ಯಥಾಶಕ್ತಿ ದಾನಮಾಡುವುದರಿಂದ;

ದೇವರನ್ನು ನೆನೆದು ಭಿಕ್ಷುಕನಿಗೆ ಭಿಕ್ಷವನ್ನಿಕ್ಕುವುದರಿಂದ;

ಕೆರೆ, ಕಟ್ಟೆ, ಧರ್ಮಶಾಲೆ, ವೈದ್ಯಶಾಲೆ, ದೇವಾಲಯಗಳ ನಿರ್ಮಾಣಕಾರ್ಯದಲ್ಲಿ ಸಹಾಯ ಮಾಡುವುದರಿಂದ;

ಅನರ್ಥಕಾರಿಯಾದ ಅರ್ಥವನ್ನು ಗಳಿಸುವುದು ವ್ಯರ್ಥವಾಗಿ ಕೂಡಿಡುವುದಕ್ಕಲ್ಲ, ಸದ್ವಿನಿಯೋಗಕ್ಕೆ – ಎಂದು ನಂಬುವುದರಿಂದ;

ನಂಬಿ ನಡೆಯುವುದರಿಂದ;

ತೃಪ್ತನಾಗಿರುವುದರಿಂದ;

ಭಕ್ತಿಶ್ರದ್ಧೆಗಳಿಂದ ಒಡಗೂಡಿದ ಧರ್ಮಾಚರಣೆಯಿಂದ;

*      *      *

ನಮ್ಮ ಬದುಕನ್ನು ಸಾರ್ಥಕಮಾಡಿಕೊಳ್ಳುವುದು ಇದೇ ಪ್ರಕಾರವಾಗಿ ನಮ್ಮ ಜೀವಾವಧಿ ಸಹಸ್ರಾರು ದೈವಪ್ರೇರಿತ ದೇವಹಿತ ಕಾರ್ಯಗಳಲ್ಲಿ ಆಸಕ್ತರಾಗುವುದರಿಂದ;

ಈ ಕಾರ್ಯಗಳಲ್ಲಿ ಇಂದ್ರನೂ ಸೂರ್ಯನೂ ಶಿವನೂ ಬೃಹಸ್ಪತಿಯೂ ನಮಗೆ ಶುಭವನ್ನೀಯಲಿ!

ಓಂ ಶಾಂತಿಃ ಶಾಂತಿಃ ಶಾಂತಿಃ

ಬಿ. ಬಿ. ಡಿ. ಪವರ್ ಪ್ರೆಸ್, ಬೆಂಗಳೂರು.

# ನಮ್ಮ ಪ್ರಕಟನೆಗಳು

---

## “ ಕಾಲೆಜ್ ಬರವಣಿಗೆ ”

| | | |
|---|---|---|
| ೧. | ನಮ್ಮ ನಮ್ಮವರು | ರೂ. ೨/೮ |
| ೨. | ಬಾಲಸರಸ್ವತಿ | ರೂ. ೨/೮ |
| ೩. | ಮಕ್ಕಳ ಮಾತು | ರೂ. ೧/- |
| ೪. | ಪಚ್ಚೆಯ ತೆನೆ | ರೂ. ೧/- |
| ೫. | ಗಂಧದ ಹುಡಿ | ರೂ. ೧/- |
| ೬. | ದುರಾಸೆಯ ದಂಡ | ರೂ. ೧/೪ |
| ೭. | ಜನಪ್ರಿಯ ವಿಜ್ಞಾನ | ರೂ. ೧/೮ |
| ೮. | ಚಿನ್ನದ ದೋಸೆ | ಹನ್ನೆರಡಾಣೆ |

ನಮ್ಮ ಪ್ರಕಟನೆಗಳನ್ನು
ಕೊಂಡುಕೊಂಡು, ನಮ್ಮ ಕೆಲಸಕ್ಕೆ ನೆರವಾಗಿರಿ.

**ಕರ್ಣಾಟಕ ಸಂಘ**
**ಸೆಂಟ್ರಲ್ ಕಾಲೆಜ್, ಬೆಂಗಳೂರು.**

ಸೆಂಟ್ರಲ್ ಕಾಲೇಜ್ ವಿದ್ಯಾರ್ಥಿಗಳು
ಸೆಂಟ್ರಲ್ ಕಾಲೇಜ್ ವಿದ್ಯಾರ್ಥಿಗಳಿಗಾಗಿ
ಅಧ್ಯಾಪಕರ ಅವಲಂಬನದಿಂದ
ಸಾವಿರದೊಂಬೈನೂರ ಹದಿನೆಂಟರಲ್ಲಿ
ಸಂಸ್ಥಾಪಿಸಿದ

# ಕರ್ಣಾಟಕ ಸಂಘ

ಸೆಂಟ್ರಲ್ ಕಾಲೇಜ್ ವಿದ್ಯಾರ್ಥಿಗಳಿಗೆ
ವಾರ್ಷಿಕ ಚಂದಾ—ಎಂಟಾಣೆ ಮಾತ್ರ.

ವಿದ್ಯಾರ್ಥಿಗಳ ಚಟುವಟಿಕೆಗಳಿಗೆ
ಅನುಕೂಲವಾದ ಆಶ್ರಯಕ್ಷೇತ್ರ
ಭಾಷಣಗಳು—ವಾಚನಗಳು—ಲೇಖನಗಳು
ಪ್ರಕಟನೆಗಳು
ಕನ್ನಡದಲ್ಲಿ ಆಸಕ್ತಿಯುಳ್ಳವರೆಲ್ಲ
ನಮ್ಮ ಕಾರ್ಯದಲ್ಲಿ ಸಹಕರಿಸಿರಿ.

**ಕರ್ಣಾಟಕ ಸಂಘ**
**ಸೆಂಟ್ರಲ್ ಕಾಲೇಜ್, ಬೆಂಗಳೂರು.**